# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಜೂನ್ 2026






**"ಮಾನವೀಯ ಮೌಲ್ಯಗಳು, ಸಮಾನ ಅವಕಾಶಗಳು ಮತ್ತು ಸುಸ್ಥಿರ ಅಭಿವೃದ್ಧಿಯೊಂದಿಗೆ ಉತ್ತಮ ಸಮಾಜ ನಿರ್ಮಾಣದತ್ತ ನಮ್ಮ ಪಯಣ ನಿರಂತರ."**



Scanned with OKEN Scanner

**ಆರ್ಬಿಟ್ ಸಂಸ್ಥೆ, ಹುಮನಾಬಾದ**
ಮತ್ತು **ಸೇವಾ ಸಂಗಮ ಸಂಸ್ಥೆ, ಕಲಬುರಗಿ**

# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಜೂನ್ 2026

"ಸಮುದಾಯದ ಅಭಿವೃದ್ಧಿ, ಸಬಲೀಕರಣ ಮತ್ತು ಪರಿವರ್ತನೆಯ ಪಯಣ"











@Orbit Bidar | @Orbitbidar1993 | www.orbitbidar.in | @orbithumnabad | ORBIT Bidar



Scanned with OKEN Scanner



# ಅಧ್ಯಕ್ಷರ ಆಶೀರ್ವಚನ



**ಪ್ರಿಯ ಸಹೋದರ ಸಹೋದರಿಯರೇ,**

ಸಮಾಜದ ಅಭಿವೃದ್ಧಿಯ ಪಯಣದಲ್ಲಿ ಪ್ರತಿಯೊಂದು ಸಣ್ಣ ಹೆಜ್ಜೆಯೂ ದೊಡ್ಡ ಬದಲಾವಣೆಗೆ ಕಾರಣವಾಗುತ್ತದೆ ಎಂಬ ನಂಬಿಕೆಯೊಂದಿಗೆ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ, ಮಕ್ಕಳ ಕಲ್ಯಾಣ, ಯುವಜನರ ಅಭಿವೃದ್ಧಿ ಹಾಗೂ ಸಮುದಾಯ ಸಬಲೀಕರಣ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿವೆ.

ಈ ಮಾಸಿಕ ಸುದ್ದಿಪತ್ರಿಕೆಯಲ್ಲಿ ಕಳೆದ ತಿಂಗಳಲ್ಲಿ ವಿವಿಧ ಗ್ರಾಮಗಳು ಮತ್ತು ಸಮುದಾಯಗಳಲ್ಲಿ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮಗಳು, ತರಬೇತಿಗಳು, ಆರೋಗ್ಯ ಶಿಬಿರಗಳು, ಮಕ್ಕಳ ಹಾಗೂ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಸಮಾಜದಲ್ಲಿ ಮೂಡಿದ ಸಕಾರಾತ್ಮಕ ಬದಲಾವಣೆಗಳ ಒಂದು ನೋಟವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

ನಮ್ಮ ಸೇವಾ ಕಾರ್ಯಗಳಿಗೆ ನಿರಂತರವಾಗಿ ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಿರುವ ಸಿಬ್ಬಂದಿ, ಸ್ವಯಂಸೇವಕರು, ದಾನಿಗಳು, ಸಹಭಾಗಿತ್ವ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಹಾಗೂ ಸಮುದಾಯದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಿಮ್ಮ ಸಹಕಾರವೇ ನಮ್ಮ ಸೇವಾ ಕಾರ್ಯಗಳಿಗೆ ಪ್ರೇರಣೆ ಮತ್ತು ಶಕ್ತಿಯಾಗಿದೆ.

ಮುಂದಿನ ದಿನಗಳಲ್ಲಿಯೂ ಇದೇ ಉತ್ಸಾಹ ಮತ್ತು ಸಮರ್ಪಣೆಯೊಂದಿಗೆ ಸಮಾಜದ ಅಂಚಿನಲ್ಲಿರುವ ಪ್ರತಿಯೊಬ್ಬರ ಜೀವನದಲ್ಲಿ ಆಶೆ, ಅವಕಾಶ ಮತ್ತು ಅಭಿವೃದ್ಧಿಯ ಹೊಸ ಬೆಳಕನ್ನು ಮೂಡಿಸಲು ನಾವು ಬದ್ಧರಾಗಿದ್ದೇವೆ. ನಮ್ಮ ಈ ಸೇವಾ ಪಯಣಕ್ಕೆ ನಿಮ್ಮ ಅಮೂಲ್ಯ ಸಹಕಾರ ಮತ್ತು ಆಶೀರ್ವಾದ ಸದಾ ಇರಲಿ ಎಂದು ಕೋರುತ್ತಾ, ಸರ್ವಶಕ್ತ ದೇವರ ಕೃಪೆ ನಿಮ್ಮೆಲ್ಲರ ಮೇಲಿರಲೆಂದು ಪ್ರಾರ್ಥಿಸುತ್ತೇನೆ.

**ಸ್ನೇಹಪೂರ್ವಕವಾಗಿ,**

**ಅಧ್ಯಕ್ಷರು:**

ಪರಮ ಪೂಜ್ಯ ಡಾ. ರಾಬರ್ಟ್ ಮೈಕಲ್ ಮಿರಾಂದ

ಧರ್ಮಾಧ್ಯಕ್ಷರು, ಗುಲ್ಬರ್ಗ ಧರ್ಮಕ್ಷೇತ್ರ

ಅಧ್ಯಕ್ಷರು, ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ

Scanned with OKEN Scanner

# ನಿರ್ದೇಶಕರ ಸಂದೇಶ



## ಪ್ರಿಯ ಸ್ನೇಹಿತರೆ,

ಸೇವಾವಾಣಿ ಪತ್ರಿಕೆಯ ಮೂಲಕ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿವಿಧ ಸೇವಾ ಚಟುವಟಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಸಮಾಜದ ಅಗತ್ಯಗಳನ್ನು ಅರಿತು, ಮಾನವೀಯ ಮೌಲ್ಯಗಳ ಆಧಾರದ ಮೇಲೆ ನಾವು ನಮ್ಮ ಸೇವೆಯನ್ನು ನಿರಂತರವಾಗಿ ಮುಂದುವರಿಸುತ್ತಿದ್ದೇವೆ. ಮಾನಸಿಕ ಆರೋಗ್ಯ ಕಾರ್ಯಕ್ರಮ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ, ಮಕ್ಕಳ ಮನೆ ಕಾರ್ಯಕ್ರಮ, ಮಹಿಳಾ ಸಬಲೀಕರಣ ಕಾರ್ಯಕ್ರಮ, ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮಗಳು ಹಾಗೂ ಇತರ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳು ನಮ್ಮ ಸಂಸ್ಥೆಗಳ ಮೂಲಕ ಪರಿಣಾಮಕಾರಿಯಾಗಿ ನಡೆಯುತ್ತಿವೆ. ಈ ಎಲ್ಲಾ ಕಾರ್ಯಕ್ರಮಗಳ ಮೂಲಕ ಮಕ್ಕಳ, ಮಹಿಳೆಯರ ಮತ್ತು ಸಮಾಜದ ಅಗತ್ಯವಿರುವ ಜನರ ಜೀವನದಲ್ಲಿ ಉತ್ತಮ ಬದಲಾವಣೆ ತರಲು ನಾವು ಪ್ರಯತ್ನಿಸುತ್ತಿದ್ದೇವೆ.

ನಮ್ಮ ಸಂಸ್ಥೆಗಳ ವಿವಿಧ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ನಮ್ಮ ಸಿಬ್ಬಂದಿಯ ಸರ್ಪಣೆ, ಪರಿಶ್ರಮ ಮತ್ತು ಸೇವಾ ಮನೋಭಾವವೇ ಪ್ರಮುಖ ಶಕ್ತಿಯಾಗಿದೆ. ಮಕ್ಕಳೊಂದಿಗೆ, ಕುಟುಂಬಗಳೊಂದಿಗೆ ಮತ್ತು ಸಮುದಾಯದೊಂದಿಗೆ ನಮ್ಮ ಸಿಬ್ಬಂದಿ ತೋರಿಸುತ್ತಿರುವ ಕಾಳಜಿ, ಜವಾಬ್ದಾರಿ ಮತ್ತು ಬದ್ಧತೆ ನಿಜವಾಗಿಯೂ ಶ್ಲಾಘನೀಯವಾಗಿದೆ. ಸಂಸ್ಥೆಯ ಕರ್ಯಗಳಿಗೆ ನಿರಂತರವಾಗಿ ಬೆಂಬಲ ನೀಡುತ್ತಿರುವ ಎಲ್ಲಾ ಸಿಬ್ಬಂದಿ ಸದಸ್ಯರು, ಹಿತೈಷಿಗಳು ಮತ್ತು ಎಲ್ಲಾ ಬೆಂಬಲಿಗರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮುಂದಿನ ದಿನಗಳಲ್ಲಿಯೂ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಗಳು ಸಮಾಜದ ಒಳಿತಿಗಾಗಿ ಹೊಸ ಉತ್ಸಾಹ ಮತ್ತು ಬದ್ಧತೆಯೊಂದಿಗೆ ಸೇವೆಯನ್ನು ಮುಂದುವರಿಸಲಿವೆ. ನಿಮ್ಮೆಲ್ಲರ ಪ್ರಾರ್ಥನೆ, ಸಹಕಾರ ಮತ್ತು ಪ್ರೋತ್ಸಾಹ ನಮ್ಮ ಸೇವಾ ಪಯಣಕ್ಕೆ ಹೆಚ್ಚಿನ ಶಕ್ತಿಯನ್ನು ನೀಡುತ್ತದೆ. ಒಟ್ಟಾಗಿ ನಾವು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ಪ್ರಯತ್ನಿಸೋಣ. ಎಲ್ಲರಿಗೂ ಧನ್ಯವಾದಗಳು.

**ಫಾದರ್ ವಿಕ್ಟರ್ ವಾಸ್**
**ನಿರ್ದೇಶಕರು**
**ಆರ್ಬಿಟ್ ಸಂಸ್ಥೆ, ಹುಮನಾಬಾದ**

Scanned with OKEN Scanner

# “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ”



📍 **ಸ್ಥಳ: ಕುಮಾರ್ ಚಿಂಚೋಳಿ ಗ್ರಾಮ, ಹುಮನಾಬಾದ್ ತಾಲೂಕು**
📅 **ದಿನಾಂಕ: 25 ಜೂನ್ 2026**

ನರೇಗಾ ಯೋಜನೆಯ ಕೂಲಿಕಾರ್ಮಿಕರಿಗಾಗಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯೋಜಕಿ ಶ್ರೀಮತಿ ಪೂಜಾ ಅವರು ಮಾನಸಿಕ ಆರೋಗ್ಯದ ಮಹತ್ವ, ಮಾನಸಿಕ ಅಸ್ವಸ್ಥತೆಗಳ ಲಕ್ಷಣಗಳು, ಕಾರಣಗಳು, ಚಿಕಿತ್ಸೆ ಹಾಗೂ ಕುಟುಂಬದ ಬೆಂಬಲದ ಅಗತ್ಯತೆಯ ಕುರಿತು ಮಾಹಿತಿ ನೀಡಿದರು. ಜೊತೆಗೆ, ಮಾನಸಿಕ ಅಸ್ವಸ್ಥರನ್ನು ತಿರಸ್ಕರಿಸದೆ ಪ್ರೀತಿ, ಸಹಾನುಭೂತಿ ಮತ್ತು ಗೌರವದಿಂದ ಕಾಣುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ 62 ಮಂದಿ ನರೇಗಾ ಯೋಜನೆಯ ಕೂಲಿಕಾರ್ಮಿಕರು ಭಾಗವಹಿಸಿ ಪ್ರಯೋಜನ ಪಡೆದರು.

# “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ”

📍 **ಸ್ಥಳ: ಹುಮನಾಬಾದ್ ತಾಲೂಕು / 📅 ದಿನಾಂಕ: 05 ಜೂನ್ 2026**

ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ವತಿಯಿಂದ ಅಂಗನವಾಡಿ ಕೇಂದ್ರಗಳಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಗಿಡಗಳಿಗೆ ನೀರುಣಿಸುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಶ್ರೀಮತಿ ಸಾರಿಕಾ ಮತ್ತು ಶ್ರೀಮತಿ ಸಂಗೀತಾ ಭಾಗವಹಿಸಿದರು. ಶ್ರೀ ಸೂರ್ಯಕಾಂತ್ ಅವರು ಪರಿಸರ ಸಂರಕ್ಷಣೆಯ ಮಹತ್ವ, ಪ್ರಕೃತಿ ಸಮತೋಲನ ಕಾಪಾಡುವ ಅಗತ್ಯತೆ ಹಾಗೂ ಪ್ಲಾಸ್ಟಿಕ್ ಬಳಕೆ, ಅರಣ್ಯ ನಾಶ ಮತ್ತು ಮಾಲಿನ್ಯದಿಂದ ಉಂಟಾಗುತ್ತಿರುವ ಪರಿಸರ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಿದರು. ಈ ಕಾರ್ಯಕ್ರಮದ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಜವಾಬ್ದಾರಿಯ ಮಹತ್ವವನ್ನು ತಿಳಿಸಲಾಯಿತು.



📍 **ಸ್ಥಳ: ಆರ್ಬಿಟ್ ಸಂಸ್ಥೆ ಕೇಂದ್ರ, ಹುಮನಾಬಾದ್ - 📅 ದಿನಾಂಕ: 19 ಜೂನ್ 2026**

## ಬೆಳವಣಿಗೆ ಕುಂಠಿತ ಮಕ್ಕಳಿಗೆ ವಿಶೇಷ ಚಟುವಟಿಕೆಗಳು

ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ ಎಪಿಡಿ ಸಂಸ್ಥೆ, ಬೆಂಗಳೂರು ವತಿಯಿಂದ ಆಗಮಿಸಿದ್ದ ಶ್ರೀ ಪ್ರದೀಪ್ ಅವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಪೋಷಕರ ಸಹಯೋಗದೊಂದಿಗೆ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಿಕೊಟ್ಟರು. ಚಟುವಟಿಕೆಗಳಲ್ಲಿ ನಿಲ್ಲುವ ಹಾಗೂ ನಡೆಯುವ ಕೌಶಲ್ಯ ವೃದ್ಧಿ, ಶಬ್ದಕ್ಕೆ ಪ್ರತಿಕ್ರಿಯಿಸುವಿಕೆ, ಆಟದ ಮೂಲಕ ಕಲಿಕೆ, ದೈನಂದಿನ ಜೀವನ ಕೌಶಲ್ಯಗಳ ಅಭ್ಯಾಸ, ಬಣ್ಣಗಳು, ಪ್ರಾಣಿಗಳು ಹಾಗೂ ತರಕಾರಿಗಳನ್ನು ಗುರುತಿಸುವ ತರಬೇತಿಯನ್ನು ನೀಡಲಾಯಿತು.



# “ಆಟದ ಮೂಲಕ ಕಲಿಕೆ ಮತ್ತು ಬೆಳವಣಿಗೆಗೆ ಉತ್ತೇಜನ”



Scanned with OKEN Scanner



📍 **ಸ್ಥಳ: ಆರ್ಬಿಟ್ ಸಂಸ್ಥೆ ಕೇಂದ್ರ, ಹುಮನಾಬಾದ್**
📅 **ದಿನಾಂಕ: 22 ಜೂನ್ 2026**

ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ವತಿಯಿಂದ ವಿಶೇಷ ವಿಕಲಚೇತನ ಮಕ್ಕಳ ತಾಯಂದಿರ ಸಭೆಯನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಕಾರ್ಯಕರ್ತೆ ಶ್ರೀಮತಿ ಕವಿತಾ ಅವರು ಮಕ್ಕಳ ದೈನಂದಿನ ಜೀವನ ಕೌಶಲ್ಯ, ಸ್ವಾವಲಂಬನೆ, ಆಟದ ಮೂಲಕ ಕಲಿಕೆ, ಭಾಷಾ ಅಭಿವೃದ್ಧಿ ಹಾಗೂ ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಕಲಿಯುವ ಮಹತ್ವದ ಕುರಿತು ಮಾಹಿತಿ ನೀಡಿದರು. ಮಕ್ಕಳಿಗೆ ಸರಳ ಮತ್ತು ನಿರಂತರ ಚಟುವಟಿಕೆಗಳ ಮೂಲಕ ಕೌಶಲ್ಯಗಳನ್ನು ಬೆಳೆಸುವಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ 15 ಮಂದಿ ತಾಯಂದಿರು ಭಾಗವಹಿಸಿ ಪ್ರಯೋಜನ ಪಡೆದರು.

# ಮಹಿಳಾ ಸಬಲೀಕರಣ ಕಾರ್ಯಕ್ರಮ

📍 **ಸ್ಥಳ: ಆರ್ಬಿಟ್ ಸಂಸ್ಥೆ ಕೇಂದ್ರ, ಹುಮನಾಬಾದ್ - 📅 ದಿನಾಂಕ: 22 ಜೂನ್ 2026**

ಆರ್ಬಿಟ್ ಸಂಸ್ಥೆಯ ಆವರಣದಲ್ಲಿ ಜನಶಕ್ತಿ ತಾಲೂಕು ಒಕ್ಕೂಟ ಹಾಗೂ ಬೆಳದಿಂಗಳ ಜಿಲ್ಲಾ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಸ್ವಚ್ಛತೆ, ಗಿಡಮರಗಳ ಮಹತ್ವ ಹಾಗೂ ಮುಂದಿನ ಪೀಳಿಗೆಯ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಮರಗಳನ್ನು ಬೆಳೆಸುವ ಅಗತ್ಯತೆಯ ಕುರಿತು ಅರಿವು ಮೂಡಿಸಲಾಯಿತು.

ಈ ಕಾರ್ಯಕ್ರಮದಲ್ಲಿ 25 ಮಂದಿ ಸದಸ್ಯರು ಭಾಗವಹಿಸಿ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿದರು.






📍 **ಸ್ಥಳ: ಹುಮ್ನಾಬಾದ್, ಬೀದರ ಜಿಲ್ಲೆ**
📅 **ದಿನಾಂಕ: 05 ಜೂನ್ 2026**

## "ಜನಶಕ್ತಿ ತಾಲೂಕು ಹಾಗೂ ಬೆಳದಿಂಗಳು ಜಿಲ್ಲಾ ಒಕ್ಕೂಟದ ಸಭೆ"

ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಮಹಿಳಾ ಸಬಲೀಕರಣ ಯೋಜನೆಯಡಿ ಜನಶಕ್ತಿ ತಾಲೂಕು ಒಕ್ಕೂಟ ಹಾಗೂ ಬೆಳದಿಂಗಳು ಜಿಲ್ಲಾ ಒಕ್ಕೂಟದ ಸಭೆ ನಡೆಯಿತು. ಸಭೆಯಲ್ಲಿ ಮಾನಿನಿ ರಾಜ್ಯ ಒಕ್ಕೂಟದ ಸದಸ್ಯೆ ಶ್ರೀಮತಿ ಭಾಗ್ಯಶ್ರೀ ಅವರು ಬೆಂಗಳೂರಿನಲ್ಲಿ ಕ್ರಾಸ್ ಸಂಸ್ಥೆಯಲ್ಲಿ ನಡೆದ ರಾಜ್ಯಮಟ್ಟದ ಸಭೆಯ ಪ್ರಮುಖ ನಿರ್ಣಯಗಳು ಹಾಗೂ ಮಾರ್ಗಸೂಚಿಗಳನ್ನು ಸದಸ್ಯರೊಂದಿಗೆ ಹಂಚಿಕೊಂಡರು. ಸಭೆಯಲ್ಲಿ ಲಿಂಗ ಸಮಾನತೆ ಕುರಿತ ವಿಷಯಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸುವುದು, ಜುಲೈ 10ರೊಳಗೆ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ವಿವಿಧ ಕ್ಷೇತ್ರಗಳ ತಜ್ಞರು ಮತ್ತು ಸಂಸ್ಥೆಗಳೊಂದಿಗೆ ಪರಿಚಯ ಬೆಳೆಸಿ ಸಮುದಾಯ ಜಾಲವನ್ನು ವಿಸ್ತರಿಸುವ ಕುರಿತು ಚರ್ಚಿಸಲಾಯಿತು. ಇದೇ ವೇಳೆ ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳಿಗೆ ಅಗತ್ಯ ಬೆಂಬಲ ಹಾಗೂ ನಾಯಕತ್ವ ತರಬೇತಿ ನೀಡುವ ಕುರಿತು ನಿರ್ಧರಿಸಲಾಯಿತು. ಪ್ರತಿ ತಿಂಗಳ ಕೊನೆಯ ವಾರದಲ್ಲಿ ನಡೆಯುವ ರಾಜ್ಯ ಒಕ್ಕೂಟದ ಸಭೆಯಲ್ಲಿ ಭಾಗವಹಿಸಿ, ಒಕ್ಕೂಟದ ಚಟುವಟಿಕೆಗಳ ಪ್ರಗತಿಯನ್ನು ಹಂಚಿಕೊಳ್ಳುವಂತೆ ಸದಸ್ಯರಿಗೆ ಸೂಚಿಸಲಾಯಿತು.



Scanned with OKEN Scanner



📍 **ಸ್ಥಳ: ವಡ್ಡನಕೇರಾ ಗ್ರಾಮ** 📅 **ದಿನಾಂಕ: 12 ಜೂನ್ 2026**

ಮಹಿಳಾ ಸಬಲೀಕರಣ ಯೋಜನೆಯಡಿ ವಡ್ಡನಕೇರಾ ಗ್ರಾಮದಲ್ಲಿ ಕಿರಣ ಮಹಾಸಂಗದ ಸದಸ್ಯರು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಸಂಪನ್ಮೂಲ ವ್ಯಕ್ತಿ ಆರಕ್ಷಕ ಅಧಿಕಾರಿ ಶ್ರೀ ರಾಜಪ್ಪ ಹಾಗೂ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲಾ ಪರಿಸರ ಸಂರಕ್ಷಣೆಯ ಮಹತ್ವ ಕುರಿತು ಮಾಹಿತಿ ನೀಡಿದರು. ಪರಿಸರವು ಮಾನವನ ಜೀವನದ ಮೂಲ ಆಧಾರವಾಗಿದ್ದು, ಶುದ್ಧ ಗಾಳಿ, ನೀರು ಮತ್ತು ಹಸಿರು ಪರಿಸರವು ಆರೋಗ್ಯಕರ ಜೀವನಕ್ಕೆ ಅತ್ಯಗತ್ಯ ಎಂಬುದನ್ನು ವಿವರಿಸಲಾಯಿತು. ಮರ ನೆಡುವುದು, ನೀರನ್ನು ಮಿತವಾಗಿ ಬಳಸುವುದು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು ಹಾಗೂ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕು ಎಂದು ಕರೆ ನೀಡಲಾಯಿತು. ಸರ್ಕಾರಿ ಶಾಲೆಯ ಅತಿಥಿ ಶಿಕ್ಷಕಿ, ಅಂಗನವಾಡಿ ಸಹಾಯಕಿಯರು, ಮಕ್ಕಳು ಹಾಗೂ ಮಹಿಳೆಯರು ಭಾಗವಹಿಸಿ ವಿಶ್ವ ಪರಿಸರ ದಿನದ ಮಹತ್ವವನ್ನು ಅರಿತುಕೊಂಡರು.



📍 **ಸ್ಥಳ: ನಿಂಬೂರು ಗ್ರಾಮ, ಹುಮ್ನಾಬಾದ್ ತಾಲೂಕು**
📅 **ದಿನಾಂಕ: 17 ಜೂನ್ 2026**

# "ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಮುನ್ನೆಚ್ಚರಿಕೆ ಕುರಿತು ವಿದ್ಯಾರ್ಥಿಗಳಿಗೆ ಅರಿವು"

ಹುಮ್ನಾಬಾದ್ ತಾಲೂಕಿನ ನಿಂಬೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸ್ಪರ್ಶ ಕ್ಯಾನ್ಸರ್ ಯೋಜನೆಯ ಸಂಯೋಜಕರಾದ ಶ್ರೀ ಯೋಹಾನ್ ವಾಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಕ್ಯಾನ್ಸರ್‌ನ ಕಾರಣಗಳು, ಲಕ್ಷಣಗಳು, ವಿವಿಧ ವಿಧಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು. ತಂಬಾಕು ಮತ್ತು ಮದ್ಯಪಾನದಿಂದ ದೂರವಿರುವುದು, ಪೌಷ್ಟಿಕ ಆಹಾರ ಸೇವಿಸುವುದು, ನಿಯಮಿತ ವ್ಯಾಯಾಮ ಮಾಡುವುದು, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ಹಾಗೂ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಕ್ಯಾನ್ಸರ್ ತಡೆಗಟ್ಟಲು ಪರಿಣಾಮಕಾರಿ ಕ್ರಮಗಳಾಗಿವೆ ಎಂದು ಅವರು ತಿಳಿಸಿದರು. ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳನ್ನು ನಿರ್ಲಕ್ಷಿಸದೆ, ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸಲಹೆ ಪಡೆಯುವ ಅಗತ್ಯವನ್ನು ಉದಾಹರಣೆಗಳೊಂದಿಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಮುಖ್ಯೋಪಾಧ್ಯಾಯರು, ಶಿಕ್ಷಕ-ಶಿಕ್ಷಕಿಯರು ಸೇರಿದಂತೆ 77 ಮಂದಿ ಭಾಗವಹಿಸಿ, ಕ್ಯಾನ್ಸರ್ ಕುರಿತು ಅಗತ್ಯ ಜಾಗೃತಿ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು.



ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ರೋಸ್ಮೆರಿ ಅವರು ಕವಿತಾ ಶಾಲೆಯ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ತರಬೇತಿ ನೀಡಿದರು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು, ನೀರಿನ ಉಳಿತಾಯ, ಗಿಡಗಳನ್ನು ನೆಟ್ಟು ಪೋಷಿಸುವುದು, ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವುದು ಹಾಗೂ ವಿದ್ಯುತ್ ಉಳಿತಾಯದಂತಹ ಪರಿಸರ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು. ಪರಿಸರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಪಾತ್ರ ಮಹತ್ವದ್ದಾಗಿದೆ ಎಂಬ ಸಂದೇಶವನ್ನು ಕಾರ್ಯಕ್ರಮದ ಮೂಲಕ ನೀಡಲಾಯಿತು.

📍 **ಸ್ಥಳ: ಶಹಗಂಜ್, ಬೀದರ**
📅 **ದಿನಾಂಕ: 25 ಜೂನ್ 2026**

# "ವಿದ್ಯಾರ್ಥಿಗಳಿಗೆ ಪರಿಸರ ಸ್ನೇಹಿ ಜೀವನಶೈಲಿಯ ಕುರಿತು ಅರಿವು"



Scanned with OKEN Scanner

📍 **ಸ್ಥಳ: ಆರ್ಬಿಟ್ ಸಂಸ್ಥೆ, ಹುಮ್ನಾಬಾದ್**
📅 **ದಿನಾಂಕ: 16 ಜೂನ್ 2026**



ಆರ್ಬಿಟ್ ಸಂಸ್ಥೆಯ ವತಿಯಿಂದ ಸಮೃದ್ಧಿ ಯೋಜನೆಯಡಿ ಚಿಟಗುಪ್ಪ ತಾಲೂಕಿನ ಒನಕೆ ಓಬವ್ವ ಸಂಘ ಹಾಗೂ ಬೀದರ ತಾಲೂಕಿನ ರೋಜ್ ಸಂಘದ ಸದಸ್ಯರಿಗೆ ಸ್ವ ಉದ್ಯೋಗ ಆರಂಭಿಸಲು ಆರ್ಥಿಕ ನೆರವಿನ ಚೆಕ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಿಸ್ಟರ್ ಸೋನಿಯಾ ಅವರು ಫಲಾನುಭವಿಗಳು ನೆರವನ್ನು ಸ್ವ ಉದ್ಯೋಗಕ್ಕೆ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಹಾಗೂ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಭಾಗವಹಿಸಿ ಸ್ವ ಉದ್ಯೋಗದ ಮಹತ್ವದ ಕುರಿತು ಮಾಹಿತಿ ಪಡೆದರು.

## ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಉತ್ತೇಜನ

📍 **ಸ್ಥಳ: ನಿಟ್ಟೂರು ಗ್ರಾಮ, ಬಾಲ್ಕಿ ತಾಲೂಕು**
📅 **ದಿನಾಂಕ: 25 ಜೂನ್ 2026**




ನಿಟ್ಟೂರು ಪ್ರೌಢ ಶಾಲೆಯಲ್ಲಿ ಮಹಿಳಾ ಸಬಲೀಕರಣ ಯೋಜನೆಯಡಿ ಲಿಂಗ ಸಮಾನತೆ ಕುರಿತು ಜಾಗೃತಿ ತರಬೇತಿ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿ ಶ್ರೀಮತಿ ನಿರ್ಮಲಾ ಅವರು ಕುಟುಂಬ, ಶಿಕ್ಷಣ, ಉದ್ಯೋಗ, ಸಮಾಜ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆ ಮತ್ತು ಪುರುಷರಿಗೆ ಸಮಾನ ಅವಕಾಶಗಳ ಅಗತ್ಯತೆಯನ್ನು ವಿವರಿಸಿದರು. ಸಮಾನತೆ ಕುಟುಂಬದಿಂದಲೇ ಆರಂಭವಾಗಬೇಕು ಹಾಗೂ ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಲಿಂಗ ಸಮಾನತೆಯ ಮಹತ್ವವನ್ನು ಅರಿತುಕೊಂಡರು.

## ಸಮಾನತೆ ಮತ್ತು ಸಾಮಾಜಿಕ ಹೊಣೆಗಾರಿಕೆ ಕುರಿತು ವಿದ್ಯಾರ್ಥಿಗಳಿಗೆ ಅರಿವು

📍 **ಸ್ಥಳ: ಆರ್ಬಿಟ್ ಸಂಸ್ಥೆ, ಹುಮ್ನಾಬಾದ್** 📅 **ದಿನಾಂಕ: 15 ಜೂನ್ 2026**




ಆರ್ಬಿಟ್ ಸಂಸ್ಥೆಯಲ್ಲಿ ಆಂತರಿಕ ಮತ್ತು ಬಾಹ್ಯ ತಂಡದ ಸದಸ್ಯರಿಗೆ ಸಾಮರ್ಥ್ಯ ಬಲವರ್ಧನೆ ತರಬೇತಿ ಆಯೋಜಿಸಲಾಯಿತು. ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿ ಶ್ರೀಮತಿ ರೇಸ್ಮಾ ಕುಂದನ್ ಅವರು ಲಿಂಗ ಮತ್ತು ಲಿಂಗತ್ವದ ನಡುವಿನ ವ್ಯತ್ಯಾಸ, ಲಿಂಗ ಸಮಾನತೆ ಹಾಗೂ ಶಿಕ್ಷಣದ ಮಹತ್ವದ ಕುರಿತು ಮಾಹಿತಿ ನೀಡಿದರು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಸಮಾನತೆ ಕುಟುಂಬ ಮತ್ತು ಸಮುದಾಯದಿಂದಲೇ ಆರಂಭವಾಗಬೇಕು ಎಂದು ತಿಳಿಸಿದರು. ಸಂವಾದ, ಅನುಭವ ಹಂಚಿಕೆ ಹಾಗೂ ಜಾಗೃತಿ ಗೀತೆಗಳ ಮೂಲಕ ತರಬೇತಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ 35 ಮಂದಿ ಶಿಬಿರಾರ್ಥಿಗಳು ಭಾಗವಹಿಸಿ ಲಿಂಗ ಸಮಾನತೆ ಮತ್ತು ನಾಯಕತ್ವ ಕೌಶಲ್ಯಗಳ ಕುರಿತು ಅರಿವು ಪಡೆದರು.

📍 **ಸ್ಥಳ: ಉಚ್ಚ ಗ್ರಾಮ, ಭಾಲ್ಕಿ ತಾಲೂಕು** 📅 **ದಿನಾಂಕ: 06 ಜೂನ್ 2026**




ಉಚ್ಚ ಗ್ರಾಮದಲ್ಲಿ ಜೈ ಭವಾನಿ ಆರೈಕೆದಾರರ ಸಭೆಯನ್ನು ಆಯೋಜಿಸಲಾಯಿತು. ಸಭೆಯಲ್ಲಿ ಆರೈಕೆದಾರರು ತಮ್ಮ ಅನುಭವಗಳು, ಸವಾಲುಗಳು ಹಾಗೂ ಪರಿಹಾರಗಳನ್ನು ಪರಸ್ಪರ ಹಂಚಿಕೊಂಡರು. ಸಿಬಿಆರ್ ಸಿಬ್ಬಂದಿ ಶ್ರೀ ಪ್ರಕಾಶ್ ಅವರು ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ಸಹನೆ, ಪ್ರೀತಿ, ಸರಿಯಾದ ಚಿಕಿತ್ಸೆ ಹಾಗೂ ಕುಟುಂಬ ಮತ್ತು ಸಮುದಾಯದ ಬೆಂಬಲದ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ 7 ಮಂದಿ ಆರೈಕೆದಾರರು ಭಾಗವಹಿಸಿ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನವನ್ನು ಪಡೆದರು.



Scanned with OKEN Scanner

📍 **ಸ್ಥಳ: ಮಂಗಳೂರು ಗ್ರಾಮ, ಬಸವಕಲ್ಯಾಣ ತಾಲೂಕು**
📅 **ದಿನಾಂಕ: 03 ಜೂನ್ 2026**

ಆರ್ಬಿಟ್ ಸಂಸ್ಥೆ ಹಾಗೂ ನವಜೀವನ-ಲಿವ್ ಲವ್ ಲಾಫ್ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ ಮಂಗಲಾ ಆರೈಕೆದಾರರ ಸಂಘದ ಸಭೆ ನಡೆಯಿತು. ಸಭೆಯಲ್ಲಿ ಆರೈಕೆದಾರರು ಮತ್ತು ಫಲಾನುಭವಿಗಳಿಗೆ ಯುಡಿಐಡಿ (UDID) ಕಾರ್ಡ್, ಮಾಸಿಕ ವೇತನ, ಉಚಿತ ಚಿಕಿತ್ಸೆ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಮಾನಸಿಕ ಅಸ್ವಸ್ಥರಿಗೆ ಪ್ರೀತಿ, ಕಾಳಜಿ ಮತ್ತು ಕುಟುಂಬದ ಬೆಂಬಲದೊಂದಿಗೆ ಆರೈಕೆ ನೀಡುವ ಮಹತ್ವವನ್ನು ವಿವರಿಸಲಾಯಿತು. ಜೊತೆಗೆ, ಉದ್ಯೋಗ ಖಾತರಿ ಯೋಜನೆಯ ಪ್ರಯೋಜನ ಪಡೆಯಲು ಜಾಬ್ ಕಾರ್ಡ್ ಮಾಡಿಸಿಕೊಳ್ಳುವಂತೆ ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಸಲಹೆ ನೀಡಿದರು.




📍 **ಸ್ಥಳ: ಚಳಕಪೂರ್ ಗ್ರಾಮ, ಭಾಲ್ಕಿ ತಾಲೂಕು**
📅 **ದಿನಾಂಕ: 04 ಜೂನ್ 2026**

ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ ವಿಶ್ವಾ ಆರೈಕೆದಾರರ ಸಭೆ ನಡೆಯಿತು. ಕಾರ್ಯಕರ್ತರಾದ ಶ್ರೀ ಪ್ರಕಾಶ್ ಅವರು ಮಾನಸಿಕ ಆರೋಗ್ಯ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಸಮಯೋಚಿತ ಚಿಕಿತ್ಸೆಯ ಅಗತ್ಯತೆ ಹಾಗೂ ಸಮಾಜದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸುವ ಕುರಿತು ಮಾಹಿತಿ ನೀಡಿದರು. ಭಾಲ್ಕಿ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿರುವ ಉಚಿತ ಮನೋವೈದ್ಯಕೀಯ ತಪಾಸಣೆ, ಯುಡಿಐಡಿ (UDID) ಕಾರ್ಡ್, ಪಿಂಚಣಿ ಹಾಗೂ ಉದ್ಯೋಗ ಖಾತರಿ ಯೋಜನೆ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ 9 ಮಂದಿ ಭಾಗವಹಿಸಿ ಮಾಹಿತಿ ಪಡೆದರು.





📍 **ಸ್ಥಳ: ಶಿವಪೂರ ಗ್ರಾಮ, ಬಸವಕಲ್ಯಾಣ ತಾಲೂಕು**
📅 **ದಿನಾಂಕ: 08 ಜೂನ್ 2026**

ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್ (LLLF) ಸಂಯುಕ್ತ ಆಶ್ರಯದಲ್ಲಿ ಮೈಲಾರಲಿಂಗೇಶ್ವರ ಆರೈಕೆದಾರರ ಗುಂಪು ಸಭೆ ನಡೆಯಿತು. ಕಾರ್ಯಕ್ರಮದಲ್ಲಿ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆ ಅವರು ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ನಿಯಮಿತ ಔಷಧ ಸೇವನೆ, ವೈಯಕ್ತಿಕ ಸ್ವಚ್ಛತೆ, ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹಾಗೂ ಯೋಗ ಮತ್ತು ಧ್ಯಾನದ ಮಹತ್ವದ ಕುರಿತು ಮಾಹಿತಿ ನೀಡಿದರು.
ಜೊತೆಗೆ ಯುಡಿಐಡಿ (UDID) ಕಾರ್ಡ್, ಮಾಸಿಕ ಪಿಂಚಣಿ ಮತ್ತು ಆರೋಗ್ಯ ಕಾರ್ಡ್ ಸೇರಿದಂತೆ ವಿವಿಧ ಸರ್ಕಾರಿ ಸೌಲಭ್ಯಗಳ ಕುರಿತು ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ 6 ಮಂದಿ ಸದಸ್ಯರು ಭಾಗವಹಿಸಿದರು.



📍 **ಸ್ಥಳ: ಸಂತಪೂರ್ ಗ್ರಾಮ, ಔರಾದ್ ತಾಲೂಕು**
📅 **ದಿನಾಂಕ: 12 ಜೂನ್ 2026**

ಸಂತಪೂರ್ ಗ್ರಾಮದಲ್ಲಿ ತಾಲೂಕು ಒಕ್ಕೂಟ ಸಭೆ ನಡೆಯಿತು. ಸಭೆಯಲ್ಲಿ ಲಿವ್ ಲವ್ ಲಾಫ್ ಕಾರ್ಯಕ್ರಮದ ವ್ಯವಸ್ಥಾಪಕರಾದ ಫಾದರ್ ಆನ್ಸಿ ಅವರು ತಾಲೂಕು ಒಕ್ಕೂಟದ ಉದ್ದೇಶ, ಕಾರ್ಯಚಟುವಟಿಕೆಗಳು ಹಾಗೂ ಮಾನಸಿಕ ಅಸ್ವಸ್ಥರು ಮತ್ತು ಅವರ ಕುಟುಂಬಗಳ ಹಕ್ಕುಗಳ ಕುರಿತು ಮಾಹಿತಿ ನೀಡಿದರು. ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಸದುಪಯೋಗ ಪಡೆಯುವುದು, ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವುದು ಹಾಗೂ ಸಮಸ್ಯೆಗಳನ್ನು ಸಂಬಂಧಿತ ಇಲಾಖೆಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ಕುರಿತು ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಫಲಾನುಭವಿಗಳು ಮತ್ತು ಆರೈಕೆದಾರರು ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು.



📍 **ಸ್ಥಳ: ನಾರಾಯಣಪುರ ಗ್ರಾಮ, ಬಸವಕಲ್ಯಾಣ ತಾಲೂಕು**
📅 **ದಿನಾಂಕ: 11 ಜೂನ್ 2026**

ನಾರಾಯಣಪುರ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆ ಅವರು ಮಾನಸಿಕ ಆರೋಗ್ಯ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ತಪ್ಪು ಕಲ್ಪನೆಗಳು ಹಾಗೂ ಸಮಯೋಚಿತ ಚಿಕಿತ್ಸೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ಬಸವಕಲ್ಯಾಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ನಡೆಯುವ ಉಚಿತ ಮನೋವೈದ್ಯಕೀಯ ತಪಾಸಣೆ, ಆಪ್ತ ಸಮಾಲೋಚನೆ, ಮನೆ ಭೇಟಿ ಹಾಗೂ ವಿವಿಧ ಸರ್ಕಾರಿ ಸೌಲಭ್ಯಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ 103 ವಿದ್ಯಾರ್ಥಿಗಳು ಮತ್ತು 4 ಶಿಕ್ಷಕರು ಭಾಗವಹಿಸಿದರು.



Scanned with OKEN Scanner



📍 **ಸ್ಥಳ: ಸರ್ಕಾರಿ ಆಸ್ಪತ್ರೆ, ಸಂತಪೂರ, ಬೀದರ ಜಿಲ್ಲೆ**

📅 **ದಿನಾಂಕ: 12 ಜೂನ್ 2026**

ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಸೈಕೋ-ಸೋಶಿಯಲ್ ಎಜುಕೇಶನ್ ಕಾರ್ಯಕ್ರಮ ಆಯೋಜಿಸಲಾಯಿತು. ಶ್ರೀಮತಿ ರೂಪಾಲಿ ಸಾಲಗರೆ ಅವರು ಮಾನಸಿಕ ಆರೋಗ್ಯ, ಸಮಯೋಚಿತ ಚಿಕಿತ್ಸೆ, ಒತ್ತಡ ನಿರ್ವಹಣೆ ಹಾಗೂ ಸ್ವಯಂ ಆರೈಕೆಯ ಮಹತ್ವದ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಭಾವನಾತ್ಮಕ ಆರೋಗ್ಯ ಕಾಪಾಡಿಕೊಳ್ಳುವುದು, ಅಗತ್ಯವಿದ್ದಾಗ ವೃತ್ತಿಪರ ಸಹಾಯ ಪಡೆಯುವುದು ಹಾಗೂ ಯೋಗದ ಮೂಲಕ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳುವ ಕುರಿತು ಅರಿವು ಮೂಡಿಸಲಾಯಿತು. ಭಾಗವಹಿಸಿದವರು ಸಂವಾದದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮದ ಪ್ರಯೋಜನ ಪಡೆದರು.



📍 **ಸ್ಥಳ: ಲಕ್ಷ್ಮೀನಗರ ಗ್ರಾಮ, ಕಮಲನಗರ ತಾಲೂಕು**

📅 **ದಿನಾಂಕ: 03 ಜೂನ್ 2026**

ಲಕ್ಷ್ಮೀನಗರ ಗ್ರಾಮದಲ್ಲಿ ಆರೈಕೆದಾರರ ಗುಂಪು ಸಭೆ ನಡೆಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹಾನ್ ಅವರು ಸಭೆಯನ್ನು ನಡೆಸಿಕೊಟ್ಟು, ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ತಾಳ್ಮೆ, ಪ್ರೀತಿ, ಸಹಾನುಭೂತಿ ಹಾಗೂ ನಿಯಮಿತ ಚಿಕಿತ್ಸೆಯ ಮಹತ್ವವನ್ನು ವಿವರಿಸಿದರು. ಸಭೆಯಲ್ಲಿ ಆರೈಕೆದಾರರು ತಮ್ಮ ಅನುಭವಗಳು ಹಾಗೂ ಸವಾಲುಗಳನ್ನು ಹಂಚಿಕೊಂಡರು. ಜೊತೆಗೆ ಔಷಧಿಗಳ ನಿಯಮಿತ ಸೇವನೆ, ವೈದ್ಯರ ಸಲಹೆ ಪಾಲನೆ, ಕುಟುಂಬದ ಬೆಂಬಲ ಮತ್ತು ಸ್ವಯಂ ಆರೈಕೆಯ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ 6 ಮಂದಿ ಆರೈಕೆದಾರರು ಭಾಗವಹಿಸಿದರು.



📍 **ಸ್ಥಳ: ಸದ್ಲಾಪುರ ಗ್ರಾಮ, ಬಸವಕಲ್ಯಾಣ ತಾಲೂಕು**

📅 **ದಿನಾಂಕ: 04 ಜೂನ್ 2026**

ಆರ್ಬಿಟ್ ಸಂಸ್ಥೆ ಹಾಗೂ ಲಿವ್ ಲವ್ ಲಾಫ್ ಫೌಂಡೇಶನ್ ವತಿಯಿಂದ ನರೇಗಾ ಕೂಲಿ ಕಾರ್ಮಿಕರಿಗಾಗಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕರ್ತರಾದ ಶ್ರೀ ವಿಜಯಕುಮಾರ್ ಅವರು ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಸಮಯೋಚಿತ ಚಿಕಿತ್ಸೆ ಹಾಗೂ ನಿಯಮಿತ ಔಷಧ ಸೇವನೆಯ ಮಹತ್ವವನ್ನು ವಿವರಿಸಿದರು. ಮಾನಸಿಕ ಕಾಯಿಲೆಯ ಬಗ್ಗೆ ಇರುವ ಮೂಢನಂಬಿಕೆಗಳನ್ನು ತೊರೆದು ವೈಜ್ಞಾನಿಕ ಚಿಕಿತ್ಸೆಯನ್ನು ಸ್ವೀಕರಿಸುವ ಅಗತ್ಯತೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಉಚಿತ ಮನೋವೈದ್ಯಕೀಯ ಸೇವೆಗಳ ಕುರಿತು ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ 48 ಮಂದಿ ಕೂಲಿ ಕಾರ್ಮಿಕರು ಭಾಗವಹಿಸಿದರು.



📍 **ಸ್ಥಳ: ಸಂತಪೂರ್ ಗ್ರಾಮ, ಔರಾದ್ ತಾಲೂಕು**

📅 **ದಿನಾಂಕ: 12 ಜೂನ್ 2026**

ಸಂತಪೂರ್ ಗ್ರಾಮದಲ್ಲಿ ತಾಲೂಕು ಒಕ್ಕೂಟ ಸಭೆ ನಡೆಯಿತು. ಸಭೆಯಲ್ಲಿ ಲಿವ್ ಲವ್ ಲಾಫ್ ಕಾರ್ಯಕ್ರಮದ ವ್ಯವಸ್ಥಾಪಕರಾದ ಫಾದರ್ ಆನ್ಸಿ ಅವರು ತಾಲೂಕು ಒಕ್ಕೂಟದ ಉದ್ದೇಶ, ಕಾರ್ಯಚಟುವಟಿಕೆಗಳು ಹಾಗೂ ಮಾನಸಿಕ ಅಸ್ವಸ್ಥರು ಮತ್ತು ಅವರ ಕುಟುಂಬಗಳ ಹಕ್ಕುಗಳ ಕುರಿತು ಮಾಹಿತಿ ನೀಡಿದರು. ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಸದುಪಯೋಗ ಪಡೆಯುವುದು, ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುವುದು ಹಾಗೂ ಸಮಸ್ಯೆಗಳನ್ನು ಸಂಬಂಧಿತ ಇಲಾಖೆಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ಕುರಿತು ಮಾರ್ಗದರ್ಶನ ನೀಡಲಾಯಿತು. ಸಭೆಯಲ್ಲಿ ಫಲಾನುಭವಿಗಳು ಮತ್ತು ಆರೈಕೆದಾರರು ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

# "ಸಮುದಾಯದ ಅಭಿವೃದ್ಧಿಗೆ ನಮ್ಮ ನಿರಂತರ ಪ್ರಯತ್ನ."



Scanned with OKEN Scanner

# ಯಶೋಗಾಥೆ

## ಮಾನಸಿಕ ಅಸ್ವಸ್ಥತೆಯಿಂದ ಚೇತರಿಸಿಕೊಂಡ ಶ್ರೀಮತಿ ಆಶಾ

## ನಿರಂತರ ಚಿಕಿತ್ಸೆ ಮತ್ತು ಸಮಾಲೋಚನೆಯಿಂದ ಹೊಸ ಜೀವನದತ್ತ ಯಶಸ್ವಿ ಪಯಣ

ಸ್ಥಳ: ಹಣಕುಣಿ ಗ್ರಾಮ
📅 ದಿನಾಂಕ: 27 ಜೂನ್ 2026



# ಯಶೋಗಾಥೆ

ಮಾನಸಿಕ ಅಸ್ವಸ್ಥತೆಯನ್ನು ಮೆಟ್ಟಿ ಹೊಸ ಬದುಕು ಕಟ್ಟಿಕೊಂಡ ಶ್ರೀಮತಿ ಆಶಾ
ನಿರಂತರ ಸಮಾಲೋಚನೆ, ಸರ್ಕಾರಿ ಚಿಕಿತ್ಸೆ ಮತ್ತು ಕುಟುಂಬದ ಬೆಂಬಲದಿಂದ ಜೀವನದಲ್ಲಿ ಹೊಸ ಭರವಸೆ

ಸುದ್ದಿ ವಿಷಯ:

ಹಣಕುಣಿ ಗ್ರಾಮದ ಫಲಾನುಭವಿ ಶ್ರೀಮತಿ ಆಶಾ (ತಂದೆ: ಶಂಕರ) ಅವರು ವೈಯಕ್ತಿಕ ಜೀವನದಲ್ಲಿ ಎದುರಾದ ಕುಟುಂಬದ ಸಂಕಷ್ಟಗಳಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗಿದ್ದರು. ಆರ್ಥಿಕ ಸಮಸ್ಯೆ ಹಾಗೂ ಮೂಢನಂಬಿಕೆಗಳ ಕಾರಣ ಆರಂಭದಲ್ಲಿ ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆಯದೆ ಮನೆಯಲ್ಲಿ ಉಳಿದಿದ್ದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಸಮೀಕ್ಷೆಯ ಮೂಲಕ ಅವರನ್ನು ಗುರುತಿಸಿ, ನಿರಂತರ ಮನೆ ಭೇಟಿ, ಸಮಾಲೋಚನೆ ಮತ್ತು ಮಾರ್ಗದರ್ಶನದ ಮೂಲಕ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸಂಪರ್ಕಿಸಿದರು. ನಿಯಮಿತ ಔಷಧೋಪಚಾರ ಮತ್ತು ನಿರಂತರ ಆರೈಕೆಯಿಂದ ಅವರ ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.

ಪ್ರಸ್ತುತ ಶ್ರೀಮತಿ ಆಶಾ ಅವರು ಸುಮಾರು 75% ಚೇತರಿಸಿಕೊಂಡಿದ್ದು, ಮನೆಯ ದೈನಂದಿನ ಕೆಲಸಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕುಟುಂಬದೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ. ತಮ್ಮ ಜೀವನದಲ್ಲಿ ಹೊಸ ಭರವಸೆ ಮೂಡಿಸಿದ ಆರ್ಬಿಟ್ ಸಂಸ್ಥೆಯ ಸೇವೆಗೆ ಅವರು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

ವರದಿಗಾರರು: ಶ್ರೀಮತಿ ಮಹಾದೇವಿ

Scanned with OKEN Scanner

# ಯಶೋಗಾಥೆ

## ವಿಶ್ವಕರ್ಮ ಯೋಜನೆಯಡಿ ಉಚಿತ ಹೊಲಿಗೆ ಯಂತ್ರ ಮತ್ತು ಉಪಕರಣಗಳ ನೆರವು

ಸ್ಥಳ: ಶಮಶರಪುರವಾಡಿ ಗ್ರಾಮ
📅 ದಿನಾಂಕ: ಜೂನ್ 2026



# ಯಶೋಗಾಥೆ

**ಸರ್ಕಾರಿ ಸೌಲಭ್ಯದಿಂದ ಸ್ವಾವಲಂಬಿ ಜೀವನದತ್ತ ಶ್ರೀಮತಿ ಅನಿತಾ ಅವರ ಯಶಸ್ವಿ ಪಯಣ.**

ಸುದ್ದಿ ವಿಷಯ:

ಶಮಶರಪುರವಾಡಿ ಗ್ರಾಮದ ಶ್ರೀಮತಿ ಅನಿತಾ (ಪತಿ: ಯಶಪ್ಪ) ಅವರು ಆರ್ಬಿಟ್ ಸಂಸ್ಥೆಯ ಮದರ್ ತೆರೇಸಾ ಸಂಘದ ಸದಸ್ಯೆಯಾಗಿದ್ದು, ಸಂಸ್ಥೆಯ ಮೂಲಕ ಸರ್ಕಾರಿ ಯೋಜನೆಗಳ ಕುರಿತು ತರಬೇತಿ ಮತ್ತು ಮಾರ್ಗದರ್ಶನ ಪಡೆದರು.

ಆರ್ಬಿಟ್ ಸಂಸ್ಥೆಯ ಸಹಕಾರದೊಂದಿಗೆ ವಿಶ್ವಕರ್ಮ ಯೋಜನೆ ಅಡಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಪರಿಣಾಮ, ಅವರಿಗೆ ಉಚಿತವಾಗಿ ಹೊಲಿಗೆ ಯಂತ್ರ, ಇಸ್ತ್ರಿ ಪೆಟ್ಟಿಗೆ ಹಾಗೂ ಇಸ್ತ್ರಿ ಟೇಬಲ್ ದೊರೆಯಿತು. ಈ ನೆರವಿನಿಂದ ಅವರು ಸ್ವ ಉದ್ಯೋಗದ ಮೂಲಕ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳುವತ್ತ ಹೆಜ್ಜೆ ಇಟ್ಟಿದ್ದಾರೆ.

ಈ ಯಶಸ್ಸಿಗೆ ಆರ್ಬಿಟ್ ಸಂಸ್ಥೆಯ ಮಾರ್ಗದರ್ಶನವೇ ಪ್ರಮುಖ ಕಾರಣವಾಗಿದ್ದು, ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ನೆರವಾದ ಸಂಸ್ಥೆಗೆ ಶ್ರೀಮತಿ ಅನಿತಾ ಅವರು ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

Scanned with OKEN Scanner

# ಯಶೋಗಾಥೆ

## ನೊಂದ ಬದುಕಿಗೆ ಹೊಸ ಭರವಸೆ ನೀಡಿದ ಆರ್ಬಿಟ್ ಸಂಸ್ಥೆ

### ನಿರಂತರ ಚಿಕಿತ್ಸೆ ಮತ್ತು ಆರೈಕೆಯಿಂದ ಚಂದ್ರಕಲಾ ಅವರ ಜೀವನದಲ್ಲಿ ಹೊಸ ಬೆಳಕು

📍 ಸ್ಥಳ: ಗಂಗನಬೀಡ್ ಗ್ರಾಮ, ಔರಾದ್ ತಾಲೂಕು
📅 ದಿನಾಂಕ: ಜೂನ್ 2026

ಯಶೋಗಾಥೆ



ಸುದ್ದಿ ವಿಷಯ:

ಔರಾದ್ ತಾಲೂಕಿನ ಗಂಗನಬೀಡ್ ಗ್ರಾಮದ ಶ್ರೀಮತಿ ಚಂದ್ರಕಲಾ (ತಂದೆ: ಪರಬತರಾವ್) ಅವರು ಕಳೆದ ನಾಲ್ಕು ವರ್ಷಗಳಿಂದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರು. ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿ ನಿರಂತರ ಚಿಕಿತ್ಸೆ, ಸಮಾಲೋಚನೆ ಹಾಗೂ ಮನೆ ಭೇಟಿಗಳ ಮೂಲಕ ಅವರು ಸೂಕ್ತ ವೈದ್ಯಕೀಯ ಸೇವೆ ಪಡೆಯುವಂತಾಯಿತು.

ನಿಯಮಿತ ಚಿಕಿತ್ಸೆಯಿಂದ ಅವರು ಸುಮಾರು 75% ಚೇತರಿಸಿಕೊಂಡಿದ್ದು, ಇಂದು ಆತ್ಮವಿಶ್ವಾಸದಿಂದ ಕುಟುಂಬ ಮತ್ತು ಸಮಾಜದೊಂದಿಗೆ ಉತ್ತಮ ಜೀವನ ನಡೆಸುತ್ತಿದ್ದಾರೆ. ಒಂದು ಕಾಲದಲ್ಲಿ ಸಮಾಜದಿಂದ ದೂರವಾಗಿದ್ದ ಕುಟುಂಬಕ್ಕೆ ಹೊಸ ಆಶಾಕಿರಣ ಮೂಡಿಸಿದ ಆರ್ಬಿಟ್ ಸಂಸ್ಥೆಯ ಸೇವೆಯನ್ನು ಸ್ಮರಿಸಿದ ಅವರು, ತಮ್ಮ ಜೀವನದಲ್ಲಿ ಹೊಸ ಭರವಸೆ ಮತ್ತು ಗೌರವವನ್ನು ತಂದ ಸಂಸ್ಥೆಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

Scanned with OKEN Scanner

# ಯಶೋಗಾಥೆ

## ನಿರಂತರ ಚಿಕಿತ್ಸೆಯಿಂದ ಆರೋಗ್ಯದಲ್ಲಿ ಕಂಡುಬಂದ ಸಕಾರಾತ್ಮಕ ಬದಲಾವಣೆ

### ಮನೆ ಭೇಟಿ ಮತ್ತು ಮಾರ್ಗದರ್ಶನದಿಂದ ಫಲಾನುಭವಿಯ ಜೀವನದಲ್ಲಿ ಹೊಸ ಭರವಸೆ

📍 ಸ್ಥಳ: ಯಾಕತಪುರ ಗ್ರಾಮ, ಬೀದರ ತಾಲೂಕು
📅 ದಿನಾಂಕ: 29 ಜೂನ್ 2026



ಯಶೋಗಾಥೆ

ಸುದ್ದಿ ವಿಷಯ:

ಯಾಕತಪುರ ಗ್ರಾಮದ ಫಲಾನುಭವಿ ಹಲವು ವರ್ಷಗಳಿಂದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದು, ಚಿಕಿತ್ಸೆಯನ್ನು ನಿಯಮಿತವಾಗಿ ಪಡೆಯದೆ ಮಧ್ಯಂತರವಾಗಿ ಮಾತ್ರ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದರು.

ಆರ್ಬಿಟ್ ಸಂಸ್ಥೆಯ ನವಜೀವನ-ಲಿವ್ ಲವ್ ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ಅವರ ಮನೆ ಭೇಟಿ, ಸಮಾಲೋಚನೆ ಮತ್ತು ನಿರಂತರ ಮಾರ್ಗದರ್ಶನದ ನಂತರ ಫಲಾನುಭವಿ ನಿಯಮಿತವಾಗಿ ಚಿಕಿತ್ಸೆ ಹಾಗೂ ಔಷಧೋಪಚಾರ ಪಡೆಯಲು ಆರಂಭಿಸಿದರು. ಇದರಿಂದ ಅವರ ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದ್ದು, ತಮ್ಮ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ ತಂದ ಆರ್ಬಿಟ್ ಸಂಸ್ಥೆ ಹಾಗೂ ಶ್ರೀ ನೋಹಾನ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ.

Scanned with OKEN Scanner

ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಮಾಸಿಕ ಸುದ್ದಿಪತ್ರಿಕೆ - ಜೂನ್ 2026

## "ಸಮುದಾಯದ ಅಭಿವೃದ್ಧಿ, ಸಬಲೀಕರಣ ಮತ್ತು ಪರಿವರ್ತನೆಯ ಪಯಣ"









@Sevasangama Kalaburagi | @sevasangama01 | www.sevasangama.in | Seva Sangama | 897 111 9914



Scanned with OKEN Scanner

**ಸ್ಥಳ: ಪ್ರಾಥಮಿಕ ಆರೋಗ್ಯ ಕೇಂದ್ರ, ಫರಹತಬಾದ ಗ್ರಾಮ, ಕಲಬುರಗಿ ತಾಲೂಕು**
📅 **ದಿನಾಂಕ: 05 ಜೂನ್ 2026**



ಸೇವಾ ಸಂಗಮ ಸಂಸ್ಥೆ ಕಲಬುರಗಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ, ಫರಹತಬಾದ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಶ್ರೀಮತಿ ಗಂಗುಬಾಯಿ ಸಸಿ ನೆಟ್ಟು ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ್ ಅವರು "ಪ್ರಕೃತಿಯಿಂದ ಪ್ರೇರಣೆ – ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ" ಎಂಬ ಘೋಷವಾಕ್ಯದ ಮಹತ್ವವನ್ನು ವಿವರಿಸಿ, ಪರಿಸರ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಉಳಿವು, ಮಾಲಿನ್ಯ ನಿಯಂತ್ರಣ ಹಾಗೂ ಮರ ನೆಡುವ ಅಗತ್ಯತೆಯ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 15 ಮಂದಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.

📍 **ಸ್ಥಳ: ಸೇವಾ ಸಂಗಮ ಸಂಸ್ಥೆ, ಕಲಬುರಗಿ**
📅 **ದಿನಾಂಕ: 10 ಜೂನ್ 2026**



ಸೇವಾ ಸಂಗಮ ಸಂಸ್ಥೆಯಲ್ಲಿ ಸ್ವ ಸಹಾಯ ಸಂಘದ ಮಹಿಳೆಯರಿಗಾಗಿ ಮಕ್ಕಳ ಬೆಳವಣಿಗೆಯ ಕುಂಠಿತತೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಶ್ರೀಮತಿ ಶ್ವೇತಾ ಅವರು ಮಕ್ಕಳ ದೈಹಿಕ, ಬೌದ್ಧಿಕ, ಭಾಷಾ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಯ ಮಹತ್ವ ಮತ್ತು ಬೆಳವಣಿಗೆಯ ಕುಂಠಿತತೆಯ ಆರಂಭಿಕ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸಮಯೋಚಿತ ಹಸ್ತಕ್ಷೇಪ, ಪೋಷಕರ ಪಾತ್ರ, ಪೌಷ್ಟಿಕ ಆಹಾರ, ಆರೋಗ್ಯ ಸೇವೆಗಳು ಹಾಗೂ ಉತ್ತಮ ಕುಟುಂಬ ವಾತಾವರಣದ ಅಗತ್ಯತೆಯನ್ನು ವಿವರಿಸಲಾಯಿತು. ಜೊತೆಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವಂತೆ ಮಹಿಳೆಯರನ್ನು ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ 35 ಮಹಿಳೆಯರು ಭಾಗವಹಿಸಿ ಉಪಯುಕ್ತ ಮಾಹಿತಿ ಪಡೆದರು.



📍 **ಸ್ಥಳ: ವೀರಭದ್ರೇಶ್ವರ ಕಾಲೋನಿ ಅಂಗನವಾಡಿ, ಕಲಬುರಗಿ**
📅 **ದಿನಾಂಕ: 08 ಜೂನ್ 2026**

ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಅಂಗನವಾಡಿ ಕೇಂದ್ರದಲ್ಲಿ ಮಹಿಳೆಯರಿಗೆ ಮಕ್ಕಳ ಬೆಳವಣಿಗೆಯ ಕುಂಠಿತತೆ ಕುರಿತು ಜಾಗೃತಿ ಆಯೋಜಿಸಲಾಯಿತು. ಶ್ರೀಮತಿ ಮಂಜುಳಾ 0 ರಿಂದ 7 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು, ಬೆಳವಣಿಗೆಯ ಕುಂಠಿತತೆಯ ಆರಂಭಿಕ ಲಕ್ಷಣಗಳು ಹಾಗೂ ಸಮಯೋಚಿತ ಹಸ್ತಕ್ಷೇಪದ ಮಹತ್ವದ ಕುರಿತು ಮಾಹಿತಿ ನೀಡಿದರು. ಬೆಳವಣಿಗೆಯಲ್ಲಿ ವಿಳಂಬ ಕಂಡುಬರುವ ಮಕ್ಕಳಿಗೆ ಉತ್ತೇಜಕ ಚಟುವಟಿಕೆಗಳ ಮೂಲಕ ನೆರವು ನೀಡಬಹುದೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ 8 ಮಹಿಳೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು.



📍 **ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಂದಿಕೂರ ಗ್ರಾಮ, ಕಲಬುರಗಿ ತಾಲೂಕು**
📅 **ದಿನಾಂಕ: 11 ಜೂನ್ 2026**

ಸೇವಾ ಸಂಗಮ ಸಂಸ್ಥೆ, ಕಲಬುರಗಿ ವತಿಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಬೆಳವಣಿಗೆಯ ಕುಂಠಿತತೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಶ್ರೀ ರಾಜಕುಮಾರ್ ಅವರು ಮಕ್ಕಳ ದೈಹಿಕ, ಬೌದ್ಧಿಕ, ಭಾಷಾ, ಸಾಮಾಜಿಕ ಹಾಗೂ ಭಾವನಾತ್ಮಕ ಬೆಳವಣಿಗೆಯ ಮಹತ್ವ ಮತ್ತು ಬೆಳವಣಿಗೆಯ ಕುಂಠಿತತೆಯ ಆರಂಭಿಕ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಕಲಿಕೆ ಹಾಗೂ ಸಾಮಾಜಿಕ ಸಂಪರ್ಕದಲ್ಲಿ ತೊಂದರೆ ಎದುರಿಸುವ ಮಕ್ಕಳಿಗೆ ಸಹಕಾರ ಮತ್ತು ಸಮಾನ ಅವಕಾಶಗಳನ್ನು ಒದಗಿಸುವ ಅಗತ್ಯತೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಲಾಯಿತು. ಕಾರ್ಯಕ್ರಮದಲ್ಲಿ 50 ವಿದ್ಯಾರ್ಥಿಗಳು, ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಭಾಗವಹಿಸಿ ಉಪಯುಕ್ತ ಮಾಹಿತಿ ಪಡೆದರು.



📍 **ಸ್ಥಳ: ಅಂಗನವಾಡಿ ಕೇಂದ್ರ-2, ಕಲಬುರಗಿ**
📅 **ದಿನಾಂಕ: 19 ಜೂನ್ 2026**

ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತರಿಗೆ ಮಕ್ಕಳ ಬೆಳವಣಿಗೆಯ ಕುಂಠಿತತೆ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.
ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಅವರು 0 ರಿಂದ 7 ವರ್ಷದ ಮಕ್ಕಳಲ್ಲಿ ಬೆಳವಣಿಗೆಯ ಕುಂಠಿತತೆಯನ್ನು ಗುರುತಿಸುವ ವಿಧಾನಗಳು, ಅದರ ಕಾರಣಗಳು ಹಾಗೂ 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯಡಿ ಗುರುತಿಸಲಾದ 21 ವಿಧದ ಅಂಗವೈಕಲ್ಯಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 40 ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿ, ಬೆಳವಣಿಗೆಯಲ್ಲಿ ಕುಂಠಿತತೆ ಕಂಡುಬರುವ ಮಕ್ಕಳನ್ನು ಗುರುತಿಸಿ ಸಂಸ್ಥೆಗೆ ಮಾಹಿತಿ ನೀಡುವಂತೆ ಸೂಚಿಸಲಾಯಿತು.



Scanned with OKEN Scanner

## 📍 ಸ್ಥಳ: ಸೇವಾ ಸಂಗಮ ಸಂಸ್ಥೆ, ಕಲಬುರಗಿ
## 📅 ದಿನಾಂಕ: 23 ಜೂನ್ 2026



ಸಣ್ಣೂರ ಮತ್ತು ಶ್ರೀನಿವಾಸ ಸರಡಗಿ ವಲಯದ 46 ಅಂಗನವಾಡಿ ಕಾರ್ಯಕರ್ತರಿಗೆ ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳು, ಕಾರಣಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಶ್ರೀಮತಿ ದಾಕ್ಷಾಯಣಿ ಅವರು ಆರೋಗ್ಯಕರ ಜೀವನಶೈಲಿ, ನಿಯಮಿತ ವ್ಯಾಯಾಮ, ಪೌಷ್ಟಿಕ ಆಹಾರ ಸೇವನೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಹಾಗೂ ರಾಸಾಯನಿಕರಹಿತ ಆಹಾರ ಸೇವನೆಯ ಮಹತ್ವವನ್ನು ವಿವರಿಸಿದರು. ಜೊತೆಗೆ ಕೈತೋಟ ಬೆಳೆಸುವುದು, ಹಸಿ ತರಕಾರಿಗಳ ಸೇವನೆ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಮೂಲಕ ಕ್ಯಾನ್ಸರ್ ಸೇರಿದಂತೆ ಅನೇಕ ಕಾಯಿಲೆಗಳನ್ನು ತಡೆಗಟ್ಟಬಹುದು ಎಂದು ತಿಳಿಸಲಾಯಿತು.

## 📍 ಸ್ಥಳ: ಮಡಿಹಳ ತಾಂಡಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಲಬುರಗಿ ಜಿಲ್ಲೆ
## 📅 ದಿನಾಂಕ: 20 ಜೂನ್ 2026



ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಮಡಿಹಳ ತಾಂಡಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮಕ್ಕಳ ಬೆಳವಣಿಗೆಯ ಕುಂಠಿತತೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಶ್ರೀಮತಿ ದಾಕ್ಷಾಯಿಣಿ ಅವರು 0 ರಿಂದ 6 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು, ಬೆಳವಣಿಗೆಯ ಕುಂಠಿತತೆಯ ಆರಂಭಿಕ ಲಕ್ಷಣಗಳು ಹಾಗೂ ಸಮಯೋಚಿತ ಹಸ್ತಕ್ಷೇಪದ ಅಗತ್ಯತೆಯನ್ನು ವಿವರಿಸಿದರು. ಬೆಳವಣಿಗೆಯಲ್ಲಿ ಕುಂಠಿತತೆ ಕಂಡುಬರುವ ಮಕ್ಕಳನ್ನು ಶೀಘ್ರವಾಗಿ ಗುರುತಿಸಿ ಸೂಕ್ತ ಉತ್ತೇಜಕ ಚಟುವಟಿಕೆಗಳನ್ನು ನೀಡುವುದರಿಂದ ಅವರ ಬೆಳವಣಿಗೆಯನ್ನು ಉತ್ತಮಗೊಳಿಸಬಹುದು ಎಂದು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ 15 ವಿದ್ಯಾರ್ಥಿಗಳು ಭಾಗವಹಿಸಿ ಮಾಹಿತಿ ಪಡೆದರು.



## 📍 ಸ್ಥಳ: ಮದರ್ ತೆರೇಸಾ ಸಭಾಂಗಣ, ಸೇಂಟ್ ಮೇರೀಸ್ ಚರ್ಚ್, ಕಲಬುರಗಿ
## 📅 ದಿನಾಂಕ: 24 ಜೂನ್ 2026

ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ 40 ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ಪ್ರವೀಣ್, ಫಾದರ್ ವಿಕ್ಟರ್ ವಾಸ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಿರಿಯ ಮೇಲ್ವಿಚಾರಕಿ ಶ್ರೀಮತಿ ಮಂಜುಳಾ ಮಕ್ಕಳ ಬೆಳವಣಿಗೆಯ ಕುಂಠಿತತೆಯನ್ನು ಶೀಘ್ರವಾಗಿ ಗುರುತಿಸಿ ಸೂಕ್ತ ಹಸ್ತಕ್ಷೇಪದ ಮೂಲಕ ಮುಖ್ಯವಾಹಿನಿಗೆ ತರಬೇಕಾದ ಅಗತ್ಯವನ್ನು ಒತ್ತಿಹೇಳಿದರು. ಸಾಕ್ಯಾ ಫೌಂಡೇಶನ್, ಬೆಂಗಳೂರಿನ ಸಂಪನ್ಮೂಲ ವ್ಯಕ್ತಿ ಶ್ರೀ ಖಾಜಾ ಹುಸೇನ್ ಅವರು ಮಕ್ಕಳ ಬೆಳವಣಿಗೆಯ ಹಂತಗಳು, ಗುರುತಿಸುವಿಕೆ ಹಾಗೂ ಉತ್ತೇಜಕ ಚಟುವಟಿಕೆಗಳ ಕುರಿತು ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಸ್ಥೆಯ ಸಿಬ್ಬಂದಿ ಹಾಗೂ 40 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು.



## 📍 ಸ್ಥಳ: ಚೇತನ ಕೇಂದ್ರ, ಕಲಬುರಗಿ
## 📅 ದಿನಾಂಕ: 22 ಜೂನ್ 2026

ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತರಿಗೆ ಮಕ್ಕಳ ಬೆಳವಣಿಗೆಯ ಕುಂಠಿತ ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.

ಯೋಜನೆಯ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ 0 ರಿಂದ 7 ವರ್ಷದ ಮಕ್ಕಳಲ್ಲಿ ಬೆಳವಣಿಗೆಯ ಕುಂಠಿತತೆಯನ್ನು ಗುರುತಿಸುವ ವಿಧಾನಗಳು, ಅದರ ಕಾರಣಗಳು ಹಾಗೂ 2016ರ ಅಂಗವಿಕಲರ ಹಕ್ಕುಗಳ ಕಾಯ್ದೆಯಡಿ ಗುರುತಿಸಲಾದ 21 ವಿಧದ ಅಂಗವೈಕಲ್ಯಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 40 ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿ, ಬೆಳವಣಿಗೆಯಲ್ಲಿ ಕುಂಠಿತತೆ ಕಂಡುಬರುವ ಮಕ್ಕಳನ್ನು ಗುರುತಿಸಿ ಸಂಸ್ಥೆಗೆ ಮಾಹಿತಿ ನೀಡುವಂತೆ ಸೂಚಿಸಲಾಯಿತು.



## 📍 ಸ್ಥಳ: ಸಣ್ಣೂರು ಮತ್ತು ಶ್ರೀನಿವಾಸ ಸರಡಗಿ ವಲಯ
## 📅 ದಿನಾಂಕ: 23 ಜೂನ್ 2026

ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಸಣ್ಣೂರು ಮತ್ತು ಶ್ರೀನಿವಾಸ ಸರಡಗಿ ವಲಯದ 40 ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ಪ್ರವೀಣ್ ಜೋಸೆಫ್, ಫಾದರ್ ಅಲ್ಬರ್ಟ್ ಹಾಗೂ ಶ್ರೀಮತಿ ಶ್ವೇತಾ ಅವರು ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತತೆಯನ್ನು ಶೀಘ್ರವಾಗಿ ಗುರುತಿಸಿ ಸೂಕ್ತ ಸೇವೆಗಳಿಗೆ ಸಂಪರ್ಕಿಸುವ ಅಗತ್ಯತೆಯನ್ನು ವಿವರಿಸಿದರು. ಸಾಕ್ಯಾ ಫೌಂಡೇಶನ್‌ನ ಸಂಪನ್ಮೂಲ ವ್ಯಕ್ತಿ ಶ್ರೀಮತಿ ನೇತ್ರಾ ಅವರು ಮಕ್ಕಳ ಬೆಳವಣಿಗೆಯ ಹಂತಗಳು, ಉತ್ತೇಜಕ ಚಟುವಟಿಕೆಗಳು ಹಾಗೂ ಪ್ರಾಯೋಗಿಕ ಕಲಿಕಾ ವಿಧಾನಗಳ ಕುರಿತು ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ 40 ಅಂಗನವಾಡಿ ಕಾರ್ಯಕರ್ತೆಯರು, ಸಂಸ್ಥೆಯ ಸಿಬ್ಬಂದಿ ಹಾಗೂ ಪಾಲಕರು ಭಾಗವಹಿಸಿದರು.



Scanned with OKEN Scanner

📍 **ಸ್ಥಳ: ಧರ್ಮಪುರ ಗ್ರಾಮ, ಕಲಬುರಗಿ ತಾಲೂಕು**
📅 **ದಿನಾಂಕ: 16 ಜೂನ್ 2026**

ಸೇವಾ ಸಂಗಮ ಸಂಸ್ಥೆಯ ವತಿಯಿಂದ ಸ್ವ ಸಹಾಯ ಸಂಘದ ಮಹಿಳೆಯರಿಗಾಗಿ ಮಕ್ಕಳ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಸೇವಕರಾದ ಶ್ರೀ ರಾಜು ಮಕ್ಕಳ ಬೆಳವಣಿಗೆಯ ಹಂತಗಳು, ಬೆಳವಣಿಗೆಯಲ್ಲಿ ವಿಳಂಬದ ಲಕ್ಷಣಗಳು ಹಾಗೂ ಆರಂಭಿಕ ಹಂತದಲ್ಲಿಯೇ ಅವುಗಳನ್ನು ಗುರುತಿಸುವ ಮಹತ್ವದ ಕುರಿತು ಮಾಹಿತಿ ನೀಡಿದರು. ಮಕ್ಕಳ ಬೆಳವಣಿಗೆಯಲ್ಲಿ ಸಮಸ್ಯೆ ಕಂಡುಬಂದರೆ ಸಮಯೋಚಿತವಾಗಿ ತಜ್ಞರ ಸಲಹೆ ಮತ್ತು ತರಬೇತಿ ಪಡೆಯುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು ಎಂದು ತಿಳಿಸಲಾಯಿತು. 15 ಸ್ವ ಸಹಾಯ ಸಂಘದ ಮಹಿಳೆಯರು ಭಾಗವಹಿಸಿ ಉಪಯುಕ್ತ ಮಾಹಿತಿ ಪಡೆದರು.



📍 **ಸ್ಥಳ: ಸೇವಾ ಸಂಗಮ ಸಂಸ್ಥೆ, ಕಲಬುರಗಿ**
📅 **ದಿನಾಂಕ: 05 ಜೂನ್ 2026**

ಸೇವಾ ಸಂಗಮ ಸಂಸ್ಥೆಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆ, ಜಾಗತಿಕ ತಾಪಮಾನ ನಿಯಂತ್ರಣ, ನೈಸರ್ಗಿಕ ಸಂಪನ್ಮೂಲಗಳ ಉಳಿವು ಹಾಗೂ ಹಸಿರು ಪರಿಸರದ ಮಹತ್ವದ ಕುರಿತು ಜಾಗೃತಿ ಮೂಡಿಸಲಾಯಿತು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಸಿಬ್ಬಂದಿ ವರ್ಗ ಹಾಗೂ 22 ಸಂಘದ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.



# “ಮಕ್ಕಳ ಮನೆ ಕಾರ್ಯಕ್ರಮ”

📍 **ಸ್ಥಳ: ವಸ್ತಾರಿ ಗ್ರಾಮ**
📅 **ದಿನಾಂಕ: 29 ಜೂನ್ 2026**

ವಸ್ತಾರಿ ಗ್ರಾಮದಲ್ಲಿ ಎರಡನೇ ಕೇಂದ್ರವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಅರುಣಕುಮಾರ್ ಯೋಜನೆಯ ಉದ್ದೇಶಗಳು ಹಾಗೂ ಕೇಂದ್ರದ ಕಾರ್ಯಚಟುವಟಿಕೆಗಳ ಕುರಿತು ಗ್ರಾಮಸ್ಥರಿಗೆ ಮಾಹಿತಿ ನೀಡಿದರು. ಗ್ರಾಮಸ್ಥರು, ಹಿರಿಯರು, ಮುಖಂಡರು ಹಾಗೂ ತಾಯಂದಿರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.
ಶ್ರೀ ಶರಣಕುಮಾರ್ ನೇತೃತ್ವದಲ್ಲಿ ಕೇಂದ್ರದ ಕಾರ್ಯಚಟುವಟಿಕೆಗಳ ಮೌಲ್ಯಮಾಪನ ನಡೆಸಲಾಯಿತು. ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿಕೊಂಡು, ಆರೈಕೆದಾರರಿಗೆ ಜವಾಬ್ದಾರಿಗಳ ಕುರಿತು ಮಾರ್ಗದರ್ಶನ ನೀಡಿದರು. ಜೊತೆಗೆ ಕೇಂದ್ರಗಳಲ್ಲಿ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಯಿತು.



📍 **ಸ್ಥಳ: ಬೀಳವಾರ ಗ್ರಾಮ**
📅 **ದಿನಾಂಕ: 01 ಜೂನ್ 2026**

ಬೀಳವಾರ ಗ್ರಾಮದಲ್ಲಿ ಕೇಂದ್ರ-1 ಹಾಗೂ ಕೇಂದ್ರ-2ರ ಉದ್ಘಾಟನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಕೇಂದ್ರ-1ರ ಉದ್ಘಾಟನಾ ಸಂದರ್ಭದಲ್ಲಿ ಶ್ರೀ ರಂಗನಾಥ ಅವರು ಹಾಗೂ ಕೇಂದ್ರ-2ರಲ್ಲಿ ಶ್ರೀ ಶರಣಕುಮಾರ್ ಯೋಜನೆಯ ಗುರಿ ಮತ್ತು ಉದ್ದೇಶಗಳ ಕುರಿತು ಗ್ರಾಮಸ್ಥರು ಹಾಗೂ ತಾಯಂದಿರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ಹಾಗೂ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದು, ಸಮುದಾಯದ ಸಹಭಾಗಿತ್ವದೊಂದಿಗೆ ಎರಡೂ ಕೇಂದ್ರಗಳ ಉದ್ಘಾಟನೆ ಯಶಸ್ವಿಯಾಗಿ ನೆರವೇರಿತು.



📍 **ಸ್ಥಳ: ಕಾಸರಬೊಸಗ ಗ್ರಾಮ, ಯಡ್ರಾಮಿ ತಾಲೂಕು**
📅 **ದಿನಾಂಕ: 30 ಜೂನ್ 2026**

ಬೀಳವಾರ ಗ್ರಾಮದಲ್ಲಿ ಕೇಂದ್ರ-1 ಹಾಗೂ ಕೇಂದ್ರ-2ರ ಉದ್ಘಾಟನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಕೇಂದ್ರ-1ರ ಉದ್ಘಾಟನಾ ಸಂದರ್ಭದಲ್ಲಿ ಶ್ರೀ ರಂಗನಾಥ ಅವರು ಹಾಗೂ ಕೇಂದ್ರ-2ರಲ್ಲಿ ಶ್ರೀ ಶರಣಕುಮಾರ್ ಯೋಜನೆಯ ಗುರಿ ಮತ್ತು ಉದ್ದೇಶಗಳ ಕುರಿತು ಗ್ರಾಮಸ್ಥರು ಹಾಗೂ ತಾಯಂದಿರಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ಹಾಗೂ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದು, ಸಮುದಾಯದ ಸಹಭಾಗಿತ್ವದೊಂದಿಗೆ ಎರಡೂ ಕೇಂದ್ರಗಳ ಉದ್ಘಾಟನೆ ಯಶಸ್ವಿಯಾಗಿ ನೆರವೇರಿತು.





Scanned with OKEN Scanner

📍 **ಸ್ಥಳ: ಆಲೂರು ಗ್ರಾಮ**
📅 **ದಿನಾಂಕ: 02 ಜೂನ್ 2026**



ಆಲೂರು ಗ್ರಾಮದಲ್ಲಿ ಎರಡನೇ ಮಕ್ಕಳ ಮನೆ ಕೇಂದ್ರವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಅಜೀಮ್ ಪ್ರೇಮ್ಜಿ ಫೌಂಡೇಶನ್‌ನ ಸಂಪನ್ಮೂಲ ವ್ಯಕ್ತಿ ಶ್ರೀ ಶರಣಕುಮಾರ್ ಸಲಗಾರೆ ಅವರು ಮಕ್ಕಳ ಮನೆ ಕಾರ್ಯಕ್ರಮದ ಗುರಿ, ಉದ್ದೇಶ ಹಾಗೂ ಮಹತ್ವದ ಕುರಿತು ಗ್ರಾಮಸ್ಥರು ಮತ್ತು ತಾಯಂದಿರಿಗೆ ಮಾಹಿತಿ ನೀಡಿದರು. ಸೇವಾ ಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಅಲ್ಬರ್ಟ್ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸಂಸ್ಥೆಯ ಸಿಬ್ಬಂದಿ, 30 ತಾಯಂದಿರು ಮತ್ತು ಮಕ್ಕಳು ಹಾಗೂ ಗ್ರಾಮಸ್ಥರು ಭಾಗವಹಿಸಿ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

# "ಮಹಿಳಾ ಸಬಲೀಕರಣ ಕಾರ್ಯಕ್ರಮ"

**ಸಮೃದ್ಧಿ ಯೋಜನೆಯಿಂದ ಸ್ವಾವಲಂಬಿ ಜೀವನ**

📍 **ಸ್ಥಳ: ನಂದಿಕೂರ ಗ್ರಾಮ, ಕಲಬುರಗಿ ನಗರ ಪ್ರದೇಶ**
📅 **ದಿನಾಂಕ: 09 ಜೂನ್ 2026**



ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದಡಿ ದೇವಕಿ ರೈತ ಸಂಘದ ಸದಸ್ಯೆ ಶ್ರೀಮತಿ ಮೀನಾಕ್ಷಿ ಅವರು ಸಮೃದ್ಧಿ ಯೋಜನೆಯಡಿ ₹35,000 ಸಾಲ ಪಡೆದು ಕಿರಾಣಿ ಅಂಗಡಿ ಆರಂಭಿಸಿ ಸ್ವಉದ್ಯೋಗದಲ್ಲಿ ತೊಡಗಿದ್ದಾರೆ. ಪ್ರಸ್ತುತ ಅವರು ತಿಂಗಳಿಗೆ ಸುಮಾರು ₹8,000 ಆದಾಯ ಗಳಿಸುತ್ತಿದ್ದು, ತಮ್ಮ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗಿದೆ ಎಂದು ತಿಳಿಸಿ, ಈ ಅವಕಾಶ ಕಲ್ಪಿಸಿದ ಸೇವಾ ಸಂಗಮ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

📍 **ಸ್ಥಳ: ಸೇವಾ ಸಂಗಮ ಸಂಸ್ಥೆ, ಕಲಬುರಗಿ**
📅 **ದಿನಾಂಕ: 09 ಜೂನ್ 2026**



ಸೇವಾ ಸಂಗಮ ಸಂಸ್ಥೆ ಹಾಗೂ ಹೆಡ್ ಹೆಲ್ಡ್ ಹೈ ಫೌಂಡೇಶನ್‌ನ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರಿಗಾಗಿ ಉಚಿತ ಆರೋಗ್ಯ ಜಾಗೃತಿ ಆಯೋಜಿಸಲಾಯಿತು. ಹೆಡ್ ಹೆಲ್ಡ್ ಹೈ ಫೌಂಡೇಶನ್‌ನ ಶ್ರೀ ಕರಬಸಪ್ಪ ಸಂಸ್ಥೆಯ ಸೇವೆಗಳು, ಉಚಿತ ಕಂಪ್ಯೂಟರ್ ತರಬೇತಿ, ಸ್ವಉದ್ಯೋಗ ಹಾಗೂ ಮಾರುಕಟ್ಟೆ ಕೌಶಲ್ಯಗಳ ಕುರಿತು ಮಾಹಿತಿ ನೀಡಿದರು. 37 ಸ್ವಸಹಾಯ ಸಂಘದ ಮಹಿಳೆಯರಿಗೆ ಆರೋಗ್ಯ ಕಿಟ್‌ಗಳನ್ನು ವಿತರಿಸಲಾಯಿತು. ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಸೇರಿದಂತೆ ವಿವಿಧ ಯೋಜನೆಗಳ ಸಂಯೋಜಕರು ಹಾಗೂ ಮಹಿಳೆಯರು ಸೇರಿ ಒಟ್ಟು 42 ಜನರು ಭಾಗವಹಿಸಿದರು.

📍 **ಸ್ಥಳ: ನಂದೂರು (ಕೆ) ಗ್ರಾಮ, ಕಲಬುರಗಿ ತಾಲೂಕು**
📅 **ದಿನಾಂಕ: 30 ಜೂನ್ 2026**





ಸೇವಾ ಸಂಗಮ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಂಯುಕ್ತ ಆಶ್ರಯದಲ್ಲಿ ನಂದೂರು (ಕೆ) ಗ್ರಾಮದ ಕುವೆಂಪು ಶತಮಾನೋತ್ಸವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗೂ ಕ್ಯಾನ್ಸರ್ ಸ್ಕ್ರೀನಿಂಗ್ ಶಿಬಿರವನ್ನು ಆಯೋಜಿಸಲಾಯಿತು.
ಕಾರ್ಯಕ್ರಮವನ್ನು ಉದ್ಘಾಟಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಮಲ್ಲೇಶಪ್ಪ ಅವರು ಆರೋಗ್ಯದ ಮಹತ್ವವನ್ನು ತಿಳಿಸಿ ಗ್ರಾಮಸ್ಥರು ಶಿಬಿರದ ಸದುಪಯೋಗ ಪಡೆಯುವಂತೆ ಕರೆ ನೀಡಿದರು. ಸಿಸ್ಟರ್ ವೀರ ಅವರು ಗ್ರಾಮೀಣ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ತಲುಪಿಸುವ ಉದ್ದೇಶದಿಂದ ಇಂತಹ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ನಿರ್ದೇಶಕರಾದ ಶ್ರೀ ಗುರುರಾಜ ಕುಲಕರ್ಣಿ ಅವರು ಆರೋಗ್ಯಕರ ಜೀವನಶೈಲಿಯ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ 90 ಜನರು ಉಚಿತ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಜೊತೆಗೆ ಸರ್ಕಾರಿ ಪ್ರೌಢ ಶಾಲೆಯ 107 ವಿದ್ಯಾರ್ಥಿಗಳಿಗೆ ಉಚಿತ ದಂತ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ವಿಕ್ಟರ್ ವಾಸ್, ಫಾದರ್ ಅಲ್ಬರ್ಟ್, ಸಿಸ್ಟರ್ ಸೋಫಿಯಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

# "ಉಚಿತ ಆರೋಗ್ಯ ತಪಾಸಣೆ ಮತ್ತು ಕ್ಯಾನ್ಸರ್ ಸ್ಕ್ರೀನಿಂಗ್ ಶಿಬಿರ"



Scanned with OKEN Scanner

📍 **ಸ್ಥಳ: ಫರಹತಾಬಾದ್ ಗ್ರಾಮ, ಕಲಬುರಗಿ ಜಿಲ್ಲೆ**
📅 **ದಿನಾಂಕ: 18 ಜೂನ್ 2026**

ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದಡಿ ಫರಹತಾಬಾದ್ ಗ್ರಾಮದ ಸಿದ್ದೇಶ್ವರ ದೇವಸ್ಥಾನದಲ್ಲಿ ವನಮಹೋತ್ಸವ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಇಂದು ಅವರು ಪರಿಸರ ಸಂರಕ್ಷಣೆಯ ಮಹತ್ವ, ಮರಗಳ ಅಗತ್ಯತೆ ಹಾಗೂ ಮನೆಗಳ ಸುತ್ತಮುತ್ತ ಸಸಿಗಳನ್ನು ನೆಟ್ಟು ಪೋಷಿಸುವ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸಿದರು.ಕಾರ್ಯಕ್ರಮದಲ್ಲಿ ಕೃಷ್ಣ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕರು ಭಾಗವಹಿಸಿದ್ದರು. 20 ಸಸಿಗಳನ್ನು ಮಹಿಳೆಯರಿಗೆ ವಿತರಿಸಲಾಗಿದ್ದು, 35 ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಸರ ಸಂರಕ್ಷಣೆಯ ಕುರಿತು ಮಾಹಿತಿ ಪಡೆದರು.



📍 **ಸ್ಥಳ: ಸಂಜುನಗರ ಕಲಿಕಾ ಕೇಂದ್ರ**
📅 **ದಿನಾಂಕ: 29 ಜೂನ್ 2026**

ಸಂಜುನಗರ ಕಲಿಕಾ ಕೇಂದ್ರದಲ್ಲಿ ಅಂತರಾಷ್ಟ್ರೀಯ ಒಲಿಂಪಿಕ್ ದಿನದ ಅಂಗವಾಗಿ ಮಕ್ಕಳಿಗೆ ಕ್ರೀಡೆಯ ಮಹತ್ವದ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕಲಿಕಾ ಕೇಂದ್ರದ ಶಿಕ್ಷಕಿ ಶ್ರೀಮತಿ ರಂಜಿತಾ ಅವರು ಕ್ರೀಡೆಯು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ವೃದ್ಧಿಸುವುದರ ಜೊತೆಗೆ ಗಂಡು-ಹೆಣ್ಣು ಸಮಾನವಾಗಿ ಕ್ರೀಡೆಯಲ್ಲಿ ಭಾಗವಹಿಸುವ ಮನೋಭಾವ ಬೆಳೆಸುತ್ತದೆ ಎಂದು ತಿಳಿಸಿದರು.
ಕಾರ್ಯಕ್ರಮದಲ್ಲಿ 21 ಮಕ್ಕಳು ಭಾಗವಹಿಸಿ ಕ್ರೀಡೆ ಮತ್ತು ಆರೋಗ್ಯದ ಮಹತ್ವದ ಕುರಿತು ಮಾಹಿತಿ ಪಡೆದರು.



# "ನಿಮ್ಮ ವಿಶ್ವಾಸ ಮತ್ತು ಸಹಕಾರವೇ ನಮ್ಮ ಸೇವೆಗೆ ಪ್ರೇರಣೆ. ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ನಿಮ್ಮೊಂದಿಗೆ ನಮ್ಮ ಪಯಣ ನಿರಂತರ."



Scanned with OKEN Scanner

# ORBIT NGO

Non-Governmental Organization
Humnaabad, Karnataka

Organization of Bidar Integral Transformation



*Together, we can*

# CREATE A BETTER TOMORROW



Your support helps us **empower lives, build communities** & bring hope.

## SCAN THIS QR CODE TO DONATE

- EMPOWER LIVES
- BUILD COMMUNITIES
- SUPPORT EDUCATION
- CREATE HOPE

*Your Small Act Can Make a Big Difference*

Visit Our Website
**www.orbitbidar.in**

## OUR MISSION

To bring positive and integral transformation in communities through education, empowerment, and sustainable development.

Humnaabad, Bidar District
Karnataka, India

Contact Us
8880843038

Scanned with OKEN Scanner




Scanned with OKEN Scanner

# Stay Connected.
# BE THE CHANGE.

**Follow Us. Support Us. Transform Lives.**

Together, we can build a stronger, kinder and empowered society.
Connect with us, follow our journey and be a part of the change.
Your support today creates a **better tomorrow**.

## ORBIT

Organization of
Bidar Integral Transformation
Bidar

**FOLLOW US ON**

- @Orbit Bidar- Organization of Bidar Integral Transformation- NGO
- @Orbitbidar
- www.orbitbidar.in
- @orbithumnabad

**GET IN TOUCH**

For Collaborations, Volunteering, Donations & More.

*Let's create impact together!*

## SEVA SANGAMA

Development Society, Kalaburagi

**FOLLOW US ON**

- @Sevasangama Kalaburagi Non-Government Organization
- @sevasangama01
- www.sevasangama.in
- 897 111 9914

**GET IN TOUCH**

For Collaborations, Volunteering, Donations & More.

*Let's create impact together!*

## BE A PART OF SOMETHING BIGGER!

- Follow our journey
- Support our cause
- Share our mission
- Spread the word
- Make a difference

*Small Actions, Big Impact.*

## TOGETHER WE CAN...

- Empower Lives
- Build Strong Communities
- Create Opportunities
- Inspire Change
- Transform Futures

Scanned with OKEN Scanner

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ

# ಧರ್ಮಕ್ಷೇತ್ರ ಗುಲ್ಬರ್ಗಾ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ. ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



TO
**DONATE,**
**SCAN THE QR CODE**

SCAN & DONATE

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

**ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.**

(Only for Indian Citizens)

**Bank Account Details**

DONATE

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


**Address**

Seva Sangama Development Society,
Near Kendriya Vidyalaya,
Kotnoor D, Kalaburagi, Karnataka-585102

**Contact**
8660968063
9743112739

**Email**
sevasangama2006@gmail.com

**Fr. Victor Anil Vas**
Director, Seva Sangama & ORBIT


Visit Us: **www.sevasangama.in**

Scanned with OKEN Scanner